**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 2706/2022**

**ಅರ್ಜಿಯ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ.01**

**ದಿನಾಂಕಃ 19.09.2025**

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರ ಶ್ರೀ ಡಿ ಜೆ ವಕೀಲರಿಂದಃ**

ನಿಪಿ.1 ದೂರನ್ನು ನಾನೇ ಬರೆದಿರುತ್ತೇನೆ. ಸದರಿ ದೂರನ್ನು ನಾನು ಮಲೆಬೆನ್ನೂರು ಠಾಣೆಯಲ್ಲಿ ಬರೆದಿರುತ್ತೇನೆ. ಸದರಿ ಸಂದರ್ಭದಲ್ಲಿ 5-6.00 ಗಂಟೆ ಸಮಯ ಆಗಿತ್ತು. ಗಲಾಟೆ ಸುಮಾರು ಸಂಜೆ 5.00 ರಿಂದ 6.00 ಗಂಟೆಗೆ ಆಗಿತ್ತು. ಸದರಿ ಗಲಾಟೆ ನನ್ನ ಗಂಡನ ಮನೆಯಲ್ಲಿ ಆಗಿತ್ತು. ಗಲಾಟೆಯಾದ 2-3 ದಿನದ ನಂತರ ನಮ್ಮ ಊರು ಹಿಂಡಸಘಟ್ಟದಲ್ಲಿ ಪಂಚಾಯ್ತಿ ಆಗಿತ್ತು. ಪಂಚಾಯ್ತಿ ಆದ 2-3 ದಿನಗಳ ನಂತರ ನಾನು ನನ್ನ ತವರು ಮನೆಗೆ ಹೋದೆನು. ದೂರನ್ನು ಸುಮಾರು 8 ದಿನಗಳ ಕಾಲ ತಡವಾಗಿ ಕೊಟ್ಟಿದ್ದೇವೆ ಎಂದರೆ ಸರಿ. ಸಾಕ್ಷಿಯು ಸದರಿ 8 ದಿನಗಳಲ್ಲಿ ಪಂಚಾಯ್ತಿ ಆಗಿತ್ತು ಆದ್ದರಿಂದ ನಾನು ಸರಿ ಹೋಗಬಹುದು ಎಂದು ಅವರೊಂದಿಗೆ ಇದ್ದೆ ಎಂದು ನುಡಿಯುತ್ತಾರೆ.

ದಿಃ 14.05.2022 ರಂದು 1 ನೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ್ದನು ಎಂದು ಹೇಳಿದ್ದು, ಸದರಿ ಸಂದರ್ಭದಲ್ಲಿ ನನಗೆ ಗಾಯಗಳಾಗಿದ್ದವು. ಸದರಿ ಗಾಯಗಳಿಗೆ ಮಲೆಬೆನ್ನೂರು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಸಂದರ್ಭದಲ್ಲಿ ನನ್ನ ಎಡಗೈ ಮುರಿದಿತ್ತು. ಕೈ ಮುರಿದಿರುವ ಬಗ್ಗೆ ದಾಖಲಾತಿಗಳನ್ನು ಪೊಲೀಸರಿಗೆ ನೀಡಿಲ್ಲ. ಸಾಕ್ಷಿಯು ನನ್ನ ಬಳಿ ದಾಖಲೆಗಳು ಇವೆ ಎಂದು ನುಡಿಯುತ್ತಾರೆ. ಈಗ ನ್ಯಾಯಾಲಯದಲ್ಲಿ ಸಲ್ಲಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿಯು ದಾಖಲೆಗಳು ಮನೆಯಲ್ಲಿ ಇವೆ ಎಂದು ನುಡಿಯುತ್ತಾರೆ. ನಮ್ಮ ಜಗಳದ ರಾಜಿ ಪಂಚಾಯ್ತಿ ಮಾಡಿದ ವ್ಯಕ್ತಿಗಳ ಹೆಸರು ಹರೀಶ ನಾಯ್ಕ ಮತ್ತು ಇನ್ನು ಇಬ್ಬರು ಮಾಡಿರುತ್ತಾರೆ. ಸದರಿ ಇಬ್ಬರ ಹೆಸರು ನನಗೆ ನೆನಪಿಲ್ಲ. ಗಲಾಟೆಯಾದ ದಿನವೇ ಪಂಚಾಯ್ತಿ ಆಗಿರುತ್ತದೆ ಸದರಿ ಪಂಚಾಯ್ತಿಗೆ ನನ್ನ ತಂದೆ ತಾಯಿ ಸಹ ಬಂದಿದ್ದರು. ನನ್ನ ತಂದೆ ತಾಯಿ ಮದ್ಯಾಹ್ಣ ಬಂದಿದ್ದರು.

ನನ್ನ ಮತ್ತು ಆರೋಪಿಯ ವಿವಾಹ ಪ್ರೇಮ ವಿವಾಹ. 1 ನೇ ಆರೋಪಿ ನನ್ನ ಗಂಡ ಹಿಂಡಸಘಟ್ಟ, ಮಲೆಬೆನ್ನೂರಿನವರು. ನನ್ನ ಊರು ತರಿಕೇರಿಯ ಲಿಂಗದಹಳ್ಳಿ. ನಾನು ಮತ್ತು 1 ನೇ ಆರೋಪಿ ಸುಮಾರು 3 ವರ್ಷಗಳ ಕಾಲ ಪ್ರೀತಿ ಮಾಡಿರುತ್ತೇವೆ. 1 ನೇ ಆರೋಪಿ ನಮ್ಮ ಊರಿಗೆ ಕೆಲಸಕ್ಕೆ ಬರುತ್ತಿದ್ದರು. ಬತ್ತ ಕೊಯ್ಯುವ ಮಷಿನ್ ನ್ನು ಚಾಲನೆ ಮಾಡುತ್ತಿದ್ದರು. 1 ನೇ ಆರೋಪಿ ನನ್ನನ್ನು ಪ್ರೀತಿಸುತ್ತಿದ್ದರು ಹಾಗೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಮದುವೆ ಕಾಲಕ್ಕೆ 1 ನೇ ಆರೋಪಿ ಯಾವುದೇ ವರದಕ್ಷಿಣೆ ಪಡೆದಿಲ್ಲ ಎಂದರೆ ಸರಿ. 1 ನೇ ಆರೋಪಿ ನನ್ನಿಂದ ಯಾವುದೇ ಬಂಗಾರದ ಕಿವಿ ಓಲೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ. ನನ್ನ ಕಿವಿ ಓಲೆ ಸುಮಾರು 15 ಗ್ರಾಂ ನಷ್ಟು ಇತ್ತು. ಮದುವೆಯಾದ 3 ವರ್ಷಗಳ ನಂತರ ಚೈನ್ ಮಷಿನ್ ನ್ನು ಖರೀದಿಸಲು ನನ್ನಿಂದ ಪಡೆದಿದ್ದರು. ಸದರಿ ಓಲೆಗಳನ್ನು ನಾವು

ವರದಕ್ಷಿಣೆಯಾಗಿ ಕೊಟ್ಟಿಲ್ಲ. ಒಂದು ಭತ್ತದ ಮಷಿನ್ ಸುಮಾರು 20-25 ಲಕ್ಷ ರೂ ಬೆಲೆ ಬಾಳುತ್ತದೆ ಎಂದರೆ ಸಾಕ್ಷಿಯು ನನ್ನ ತಾಯಿ ಅವರಿಗೆ 6 ಲಕ್ಷ ರೂ ಹಣ ಕೊಟ್ಟಿದ್ದರು ಎಂದು ನುಡಿಯುತ್ತಾರೆ. 6 ಲಕ್ಷ ರೂಗಳನ್ನು ನನ್ನ ತಾಯಿ 1 ನೇ ಆರೋಪಿಗೆ ನನ್ನ ಮದುವೆಯಾದ 3 ವರ್ಷಗಳ ನಂತರ ನೀಡಿರುತ್ತಾರೆ ಸದರಿ 6 ಲಕ್ಷ ರೂಗಳನ್ನು ನನ್ನ ತಾಯಿ 1 ನೇ ಆರೋಪಿ ಕೈಗೆ ನೀಡಿರುತ್ತಾರೆ. ಸದರಿ ಸಂದರ್ಭದಲ್ಲಿ ನಾವು ಯಾವುದೇ ದಾಖಲೆಗಳನ್ನು ಬರೆಸಿಕೊಂಡಿಲ್ಲ. ಅಷ್ಟು ಹಣವನ್ನು ನಿಮ್ಮ ತಂದೆ ತಾಯಿ ಎಲ್ಲಿಂದ ತಂದಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ತಾಯಿ ಕೂಲಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಗೆ ನಾವು 3 ಜನ ಮಕ್ಕಳು. ನಾನು ಮೊದಲನೇ ಮಗಳು. ನನ್ನ ತಂಗಿಗೆ 26 ವಯಸ್ಸು. ನನ್ನ ಚಿಕ್ಕ ತಮ್ಮನಿಗೆ 24 ವರ್ಷ ವಯಸ್ಸು. ನನ್ನ ತಂಗಿಗೆ ಮದುವೆಯಾಗಿದೆ. ನನ್ನ ತಮ್ಮ ಕೂಲಿ ಕೆಲಸ ಮಾಡುತ್ತಾನೆ. 2018 ರಲ್ಲಿ ಒಬ್ಬರಿಗೆ 1 ದಿನದ ಕೂ ರೂ. 300-400 ರೂ ಇತ್ತು. ಮಹಿಳಾ ಕೂಲಿಕಾರರಿಗೆ 1 ದಿನಕ್ಕೆ 300/ ರೂ ಮತ್ತು ಪುರುಷ ಕೂಲಿಕಾರರಿಗೆ 500/ ರೂ ಕೂಲಿ ಇತ್ತು. ಪ್ರತಿ ದಿನ ಕೂಲಿ ಕೆಲಸ ಸಿಗುವುದಿಲ್ಲ. ನನ್ನ ತಂದೆ ತಾಯಿಗೆ 3 ಎಕರೆ ಜಮೀನು ಇದೆ. ಸದರಿ ಜಮೀನಿನಲ್ಲಿ ಅಡಿಕೆ ಬೆಳೆಯುತ್ತೇವೆ. ಅದರಲ್ಲಿ  ಅರ್ಧ ಎಕರೆ ಅಡಿಕೆ ತೋಟ ಇದೆ. ಅದು ತುಂಬಾ ಹಳೆಯ ತೋಟ. ಇನ್ನುಳಿದ 2 ವರೆ ಎಕರೆ ಜಮೀನಿನಲ್ಲಿ ಜೋಳ ಬೆಳೆಯುತ್ತೇವೆ. ನನ್ನ ತಂಗಿಯದು ಸಹ ಪ್ರೇಮ ವಿವಾಹ. ನನ್ನ ತಮ್ಮನದು ಸಹ ಪ್ರೇಮ ವಿವಾಹ. ಪ್ರೇಮ ವಿವಾಹಗಳಾದ ನಂತರ ಸಂಪ್ರದಾಯದ ಪ್ರಕಾರ ಜನರಿಗೆ ಊಟ ಹಾಕಿಸುವುದು ಹಾಗೂ ಇತರೆ ಕಾರ್ಯಕ್ರಮಗಳನ್ನು ಮಾಡಿಲ್ಲ. ನಮ್ಮ ಜಮೀನಿನ ಜೋಳದ ಬೆಳೆಯಿಂದ ಖರ್ಚು ವೆಚ್ಚಗಳನ್ನು ತೆಗೆದು ನಮಗೆ ವರ್ಷಕ್ಕೆ ಸುಮಾರು 30-40 ಸಾವಿರ ರೂ ಉಳಿಯುತ್ತದೆ.

6 ನೇ ಆರೋಪಿ ಅಂಜಲಿ ನನಗೆ ಕಿರುಕುಳ ಕೊಡುತ್ತಿದ್ದರು ಎಂದು ಹೇಳಿದ್ದು ಈ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ನೀಡಿದ್ದೇನೆ. 6 ನೇ ಆರೋಪಿ 1 ನೇ ಆರೋಪಿಯನ್ನು ಹೇಗೆ ಪ್ರಚೋದಿಸುತ್ತಿದ್ದರು ಎಂದರೆ ಸಾಕ್ಷಿಯು ಅವರು ಫೋನನಲ್ಲಿ 1 ನೇ ಆರೋಪಿಗೆ ನನ್ನ ಬಗ್ಗೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. 6 ನೇ ಆರೋಪಿ ನಿಮ್ಮ ಸಮಕ್ಷಮ 1 ನೇ ಆರೊಪಿಗೆ ನಿಮ್ಮನ್ನು ಪ್ರೇರೇಪಿಸಿರುತ್ತಾರಾ ಎಂದರೆ ಸಾಕ್ಷಿಯು 1 ನೇ ಆರೋಪಿ ಅವರ ಬಳಿ ಹೋಗಿ ಬಂದಾಗ ಆ ರೀತಿ ಮಾಡುತ್ತಿದ್ದರು ನೇರವಾಗಿ ಈ ರೀತಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 6 ನೇ ಆರೋಪಿತರ ನಡುವೆ ಅಕ್ರಮ ಸಂಬಂದ ಇದೆ ಎಂಬ ಬಗ್ಗೆ ನಾನು ಛಾಯ ಚಿತ್ರಗಳನ್ನು ಸಲ್ಲಿಸಿರುತ್ತೇನೆ. ನಿಪಿ.19 ರಿಂದ 21, 1 ನೇ ಆರೋಪಿಯ ಮೊಬೈಲನಲ್ಲಿ ಇದ್ದೆವು ಅವುಗಳನ್ನು ನಾನು ನನ್ನ ಮೊಬೈಲಗೆ ಕಳುಹಿಸಿಕೊಂಡು ಫೋಟೋ ತೆಗೆದುಕೊಂಡಿರುತ್ತೇನೆ. ನಿಪಿ.19 ರಿಂದ 21 ನ್ನು ನಾನು ತೆಗೆದಿಲ್ಲ ಎಂದರೆ ಸರಿ. ನಿಪಿ.19 ರಿಂದ 21 ನ್ನು ಮಲೆಬೆನ್ನೂರಿನಲ್ಲಿ ನಾನೇ ಪ್ರಿಂಟ್ ತೆಗೆಸಿರುತ್ತೇನೆ. ಯಾ ಸ್ಟುಡಿಯೋ ಎಂದು ನನಗೆ ನೆನಪಿಲ್ಲ. ಸದರಿ ಛಾಯ ಚಿತ್ರಗಳನ್ನು ಪ್ರಿಂಟ್ ತೆಗೆಯಲು ಎಷ್ಟು ಹಣ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿಲ್ಲ. ಈ ರೀತಿ ಪ್ರಿಂಟ್ ಹಾಕಿಸಿದ ಬಗ್ಗೆ ನನಗೆ ಬಿಲ್ ನೀಡಿಲ್ಲ. ನಿಪಿ.19 ರಿಂದ 21 ನ್ನು ಪೊಲೀಸರಿಗೆ ನೀಡುವ ಸಂದರ್ಭದಲ್ಲಿ ಈ ಎಲ್ಲಾ ವಿಚಾರಗಳ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. 1 ನೇ ಆರೋಪಿ ಮತ್ತು 6 ನೇ ಆರೋಪಿ ಜೊತೆಗೆ ಇರುವುದನ್ನು ನಾನು ಪ್ರತ್ಯಕ್ಷವಾಗಿ

ನೋಡಿಲ್ಲ ಎಂದರೆ ಸರಿ. 1 ನೇ ಆರೋಪಿ ಮತ್ತು 6 ನೇ ಆರೋಪಿತರ ಛಾಯ ಚಿತ್ರಗಳನ್ನು ಪಡೆದುಕೊಂಡು ನಿಪಿ.19 ರಿಂದ 21 ನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ